**<u>ದಿಃ 08.08.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ 1 ರಿಂದ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎಚ್ ವಕೀಲರಿಂದಃ</u>

ಸಾಕ್ಷಿಗೆ ಪ್ರತಿವಾದಿಗಳ ಪರ ವಕೀಲರು ನಿಪಿ 31 ರ ಮೂಲ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಹೌದು ಎಂದು ಹೇಳಿದ್ದರಿಂದ ಸದರಿ ಮೂಲ ಪ್ರತಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ನಮ್ಮ ತಂದೆ, ನಮ್ಮ ದೊಡ್ಡಪ್ಪ ಬಸಪ್ಪ, ಚಿಕ್ಕಪ್ಪಂದಿರಾದ ಮಲ್ಲೇಶಪ್ಪ, ಪಂಚಪ್ಪ ಮತ್ತು ನಾಗರಾಜಪ್ಪ ಇವರ ಹಿಸ್ಸೆಗೆ ಬಂದ ಆಸ್ತಿಗಳ ವಿವರ ಇರುತ್ತದೆ ಎನ್ನುವುದು ನಿಜ. ನಿಡಿ 2 ಕ್ಕೆ ನಮ್ಮ ತಂದೆ, ನಮ್ಮ ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರು ಸಹಿ ಮಾಡಿರುತ್ತಾರೆ. ನಿಡಿ 2 ರಲ್ಲಿ ಇರುವ ಸಹಿ ನಮ್ಮ ತಂದೆ, ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರ ಸಹಿಗಳು ಇರುತ್ತವೆ ಎಂದರೆ ಸಾಕ್ಷಿ ಸದರಿ ಸಹಿಗಳನ್ನು ನೋಡಿ ಹೌದು ಎಂದು ಗುರುತಿಸಿರುವುದರಿಂದ ಸದರಿ ಸಹಿಗಳನ್ನು ನಿಡಿ 2 ಎ ಯಿಂದ ನಿಡಿ 2 ಈ ಎಂದು ಗುರುತಿಸಲಾಯಿತು. 5 ಜನರಲ್ಲಿಯೂ ಈ ರೀತಿಯ ಮೂಲ ಪ್ರತಿ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ನನಗೆ ಸಿಕ್ಕಿದ್ದನ್ನು ಮಾತ್ರ ತಂದಿರುತ್ತೇನೆ ಎಂದು ಹೇಳುತ್ತಾನೆ. ನಿಡಿ 2 ನಮ್ಮ ತಂದೆಗೆ ಪಾಲು ವಿಭಾಗದ ಸಮಯದಲ್ಲಿ ಕೊಟ್ಟಿರುವಂತಹದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ನಾವು ಹಾಜರು ಪಡಿಸಿರುವುದು ನಮ್ಮ ಚಿಕ್ಕಪ್ಪನ ಮನೆಯಿಂದ ತಂದದ್ದು ಎಂದು ಹೇಳುತ್ತಾನೆ. ನಿಪಿ 31 ಮತ್ತು ನಿಪಿ 32 ನ್ನು ನಮ್ಮ ಚಿಕ್ಕಪ್ಪ ಪಂಚಪ್ಪನಿಂದ ತಂದು ಹಾಜರು ಪಡಿಸಿರುತ್ತೇನೆ. ನಮ್ಮ ತಂದೆ , ನಮ್ಮ ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರು ಅವರಿಗೆ ಇರುವಂತಹ ಎಲ್ಲಾ ಆಸ್ತಿಗಳನ್ನು ಸೇರಿಸಿ ನಿಪಿ 31 ಮತ್ತು ನಿಡಿ 2 ರ ಪ್ರಕಾರ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವುದು ನಿಜ. ಹಂಚಿಕೊಂಡಂತಹ ಆಸ್ತಿಗಳನ್ನು ಬಿಟ್ಟು ಅವರಿಗೆ ಹಂಚಿಕೊಳ್ಳಬೇಕಾದಂತಹ ಬೇರೆ ಆಸ್ತಿಗಳು ಇರಲಿಲ್ಲ ಅಂದರೆ ಸರಿಯಲ್ಲ. ಆ 5 ಜನರಿಗೆ ಹಂಚಿಕೊಳ್ಳಬೇಕಾದಂತಹ ಆಸ್ತಿ ಹಣ ಮತ್ತು ಮನೆಗಳು ಇದ್ದವು. ನಿಪಿ 31 ರ ಬಿ ಷಡ್ಯೂಲನಲ್ಲಿ ನಮ್ಮ ತಂದೆಗೆ ಎರಡು ಕಣಪಾಳು ಮತ್ತು ಒಂದು ಹಂಚಿನ ಮನೆ ಕೊಟ್ಟಿರುತ್ತಾರೆ ಎನ್ನುವುದು ನಿಜ. ನಿಪಿ 31 ರ ಪ್ರಕಾರ ನಮ್ಮ ತಂದೆಗೆ ಸರ್ವೆ ನಂಃ 18/ಪಿ ನಲ್ಲಿ 2 ಎಕರೆ 30 ವರೆ ಗುಂಟೆ ಮತ್ತು ಸರ್ವೆ ನಂಃ 29/ಪಿ ರಲ್ಲಿ 1

ಎಕರೆ 31 ಗುಂಟೆ ಕೊಟ್ಟಿರುತ್ತಾರೆ ಎನ್ನುವುದು ನಿಜ. ನಮ್ಮ ದೊಡ್ಡಪ್ಪ ಬಸಪ್ಪನಿಗೆ ನಿಪಿ 31 ರ ಎ ಷಡ್ಯೂಲನ ಆಸ್ತಿಗಳು ಬಂದಿರುತ್ತವೆ ಎನ್ನುವುದು ನಿಜ. ನಮ್ಮ ಚಿಕ್ಕಪ್ಪ ಮಲ್ಲೇಶಪ್ಪನಿಗೆ ನಿಪಿ 31 ರ ಸಿ ಷಡ್ಯೂಲ ಆಸ್ತಿ ಬಂದಿರುತ್ತದೆ ಎನ್ನುವುದು ನಿಜ. ನಮ್ಮ ಚಿಕ್ಕಪ್ಪ ಪಂಚಪ್ಪ ಇವನಿಗೆ ನಿಪಿ 31 ರ ಡಿ ಷಡ್ಯೂಲ ಆಸ್ತಿ ಬಂದಿರುತ್ತದೆ ಎನ್ನುವುದು ನಿಜ. ಇನ್ನೊಬ್ಬ ಚಿಕ್ಕಪ್ಪ ನಾಗರಾಜಪ್ಪನಿಗೆ ನಿಪಿ 31 ರ ಈ ಷಡ್ಯೂಲ ಆಸ್ತಿ ಬಂದಿರುತ್ತವೆ ಎನ್ನುವುದು ನಿಜ. ನಮ್ಮ ತಂದೆ, ನಮ್ಮ ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರು ಅವರಿಗೆ ಇದ್ದಂತಹ ಜಮೀನುಗಳು, ಮನೆ ಮತ್ತು ಕಣಪಾಳುಗಳನ್ನು ಹಂಚಿಕೊಂಡಿರುತ್ತಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಜೊತೆ ಸರ್ಕಾರದಿಂದ ಬಂದಂತಹ ಮನೆಯನ್ನು ಹಂಚಿಕೊಂಡಿದ್ದರು ಎಂದು ಹೇಳುತ್ತಾರೆ. ನಿಪಿ 31 ರ ಪ್ರಕಾರ ಪಾಲು ವಿಭಾಗ ಮಾಡಿಕೊಂಡಾಗ ಸರ್ಕಾರದ ಜಾಗದಲ್ಲಿ ಮನೆ ಇತ್ತು ಆದರೆ ಕಾಗದ ಪತ್ರಗಳು ಬಂದಿರಲಿಲ್ಲ. ಸರ್ಕಾರದಿಂದ ಬಂದಂತಹ ಮನೆಯನ್ನು ನಿಪಿ 31 ರಲ್ಲಿ ಸೇರಿಸಿ ಹಂಚಿಕೊಳ್ಳಲು ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ ಕಾಗದ ಪತ್ರಗಳು ಬಂದಿರಲಿಲ್ಲ ಎಂದು ಹೇಳುತ್ತಾರೆ . ಸರ್ಕಾರದವರು ಕೊಟ್ಟಂತಹ ಮನೆಯನ್ನು ನಿಪಿ 31 ಪಾಲು ವಿಭಾಗ ಆಗುವ ಸಮಯದಲ್ಲಿ 5 ಜನ ಅಣ್ಣ ತಮ್ಮಂದಿರು ಹಂಚಿಕೊಂಡಿದ್ದರು. ಸದರಿ ಮನೆಯನ್ನು ಹಂಚಿಕೊಂಡಿರುವ ಕುರಿತು ನಿಪಿ 31 ರಲ್ಲಿ ಉಲ್ಲೇಖ ಇಲ್ಲ ಅಂದರೆ ಸಾಕ್ಷಿ ಉಲ್ಲೇಖ ಇಲ್ಲ ಆದರೆ ಕಾಗದ ಪತ್ರ ಬಂದಿರಲಿಲ್ಲ ಎಂದು ಹೇಳುತ್ತಾರೆ . ಸದರಿ ಮನೆಯನ್ನು 5 ಜನರು ವಿಭಾಗ ಮಾಡಿಕೊಂಡಿರುವುದಕ್ಕೆ ಬರವಣಿಗೆಯಲ್ಲಿ ಇರುವುದಿಲ್ಲ ಬಾಯಿ ಮಾತಿನ ಮೂಲಕ ಮಾಡಿಕೊಂಡಿರುತ್ತಾರೆ. 1986 ರಲ್ಲಿ ಸದರಿ ಮನೆಯನ್ನು ಬಾಯಿ ಮಾತಿನ ಮೂಲಕ ಹಂಚಿಕೊಂಡಿರುತ್ತಾರೆ. ತಾರೀಖು ಮತ್ತು ತಿಂಗಳು ನೆನಪಿರುವುದಿಲ್ಲ. ಸದರಿ ಮನೆಯನ್ನು ಹಂಚಿಕೊಂಡಾಗ ನಮ್ಮ ಎಲ್ಲಾ ಅಣ್ಣ ತಮ್ಮಂದಿರು ಇದ್ದರು. ಯಾರ್ಯಾರಿಗೆ ಎಷ್ಟು ವಿಸ್ತೀರ್ಣ ಬಂದಿರುತ್ತದೆ ಎಂದು ತೀರ್ಮಾನ ಮಾಡಿಲ್ಲ ಆದರೆ ಹಗ್ಗ ಹಿಡಿದು ಹಾಗೆ ಅಳತೆ ಮಾಡಿಕೊಂಡಿರುತ್ತಾರೆ. ಸರ್ಕಾರದಿಂದ ಬಂದಂತಹ ಮನೆಯನ್ನು 5 ಜನರು ಹಂಚಿಕೊಂಡಿದ್ದು ಅವರಿಗೆ ತಲಾ ಎಷ್ಟು ವಿಸ್ತೀರ್ಣ ಬಂದಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ 5 ಜನರು ತಮ್ಮ ಹೆಸರಿಗೆ ಹಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿಲ್ಲ. ಸರ್ಕಾರದವರು ಕೊಟ್ಟಂತಹ ಜಾಗದಲ್ಲಿ ಕಟ್ಟಿರುವಂತಹ

ಮನೆ ದಾವಾ ಸಿ ಷಡ್ಯೂಲನ 3 ಮತ್ತು 4 ನೇ ಆಸ್ತಿಗಳು ಎನ್ನುವುದು ನಿಜ. ದಾವಾ ಸಿ ಷಡ್ಯೂಲನ 3 ಮತ್ತು 4 ನೇ ಆಸ್ತಿಗಳು 1 ಮತ್ತು 6 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿ ಈಗ ಅವರ ಹೆಸರಿನಲ್ಲಿದ್ದು ಅವು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳುತ್ತಾರೆ. ಸದರಿ ಆಸ್ತಿಗಳ ಖಾತೆ ನಮ್ಮ ತಂದೆ, ನಮ್ಮ ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರ ಹೆಸರಿಗೆ ಎಂದೂ ಬಂದಿಲ್ಲ ಎನ್ನುವುದು ನಿಜ. ಸದರಿ ಆಸ್ತಿಗಳಿಗೆ ಮೊದಲನೇ ಖಾತೆದಾರ 1 ನೇ ಪ್ರತಿವಾದಿ ಅಂದರೆ ಸಾಕ್ಷಿ ಹೌದು ಅವನು ಮನೆಗೆ ಹಿರಿಯ ಮಗ ಅವನ ಖಾತೆಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಖಾತೆಗೆ ಬರುವ ಪೂರ್ವದಲ್ಲಿ ಸರ್ಕಾರದ ಜಮೀನು ಅಂರದೆ ಸಾಕ್ಷಿ ಸರ್ಕಾರದ ಜಮೀನು ನಾವು ಉಪಯೋಗ ಮಾಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾನೆ. 1 ನೇ ಪ್ರತಿವಾದಿ ಮನೆಗೆ ಹಿರಿಯ ಮಗ ಇರುತ್ತಾನೆ ಎಂದು ಅವರ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವಂತಹ ಸದರಿ ಆಸ್ತಿಯನ್ನು ನಮ್ಮ ತಂದೆ, ನಮ್ಮ ದೊಡ್ಡಪ್ಪ , ನಮ್ಮ ಚಿಕ್ಕಪ್ಪಂದಿರು ಹಾಗೂ ನಾನು ಎಂದಿಗೂ ಅನುಭವಿಸಿಲ್ಲ ಅಂದರೆ ಸರಿಯಲ್ಲ. ದಾವಾ ಸಿ ಷಡ್ಯೂಲನ 4 ನೇ ಆಸ್ತಿ 6 ನೇ ಪ್ರತಿವಾದಿಯ ಹೆಸರಿಗೆ ಬರುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎನ್ನುವುದು ನಿಜ. ಸದರಿ ಆಸ್ತಿಯಲ್ಲಿ 6 ನೇ ಪ್ರತಿವಾದಿ ಸರ್ಕಾರದಿಂದ ಆಶ್ರಯ ಯೋಜನೆ ಅಡಿಯಲ್ಲಿ 25,000-00 ರೂಗಳನ್ನು ಪಡೆದು ಮನೆ ಕಟ್ಟಿಸಿರುತ್ತಾರೆ ಅಂದರೆ ಸಾಕ್ಷಿ ಹಣ ತೆಗೆದುಕೊಂಡಿರುತ್ತಾರೆ ಮನೆ ರಿಪೇರಿ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಅಲ್ಲಿ ಮನೆ ಕಟ್ಟಿದ್ದರೂ ಸಹ ರಿಪೇರಿ ಮಾಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹನಗವಾಡಿಯ ಸರ್ವೆ ನಂಃ 81 ರಲ್ಲಿ ಸರ್ಕಾರದವರು ಅನೇಕ ನಿವೇಶನಗಳನ್ನು ಮಾಡಿರುತ್ತಾರೆ ಎನ್ನುವುದು ನಿಜ. ಸದರಿ ನಿವೇಶನಗಳನ್ನು ಹಂಚಿಕೆ ಮಾಡಲು ಏನೇನು ನಿಬಂಧನೆಗಳು ಇರುತ್ತವೆ ಅಂದರೆ ಸಾಕ್ಷಿ ಆಸ್ತಿ ಇರಬಾರದು, ಬಡವರಿಗೆ, ಕೂಲಿ ಮಾಡುವಂತವರಿಗೆ ಕೊಡುತ್ತಾರೆ ಎಂದು ಹೇಳುತ್ತಾರೆ. ದಾವಾ ಸಿ ಷಡ್ಯೂಲ 3 ಮತ್ತು 4 ನೇ ಆಸ್ತಿಗಳಿಗೆ ಕೊಟ್ಟಂತಹ ಹಕ್ಕು ಪತ್ರದಲ್ಲಿ ನಿಬಂಧನೆಗಳನ್ನು ಹೇಳಿರುತ್ತಾರೆ ಅಂದರೆ ಸಾಕ್ಷಿ ನಾನು ಅದನ್ನೇ ಹೇಳಿರುತ್ತೇನೆ ಎಂದು ಹೇಳುತ್ತಾರೆ. ನಿಡಿ 1 ರಲ್ಲಿರುವ ನಿಬಂಧನೆಗಳನ್ನು ಓದಿದೀಯಾ ಅಂದರೆ ಸಾಕ್ಷಿ

ಅವು ಸಣ್ಣ ಅಕ್ಷರಗಳು ಇರುತ್ತವೆ ಕಾಣಿಸುವುದಿಲ್ಲ ಎಂದು ಹೇಳುತ್ತಾರೆ. ನಾನು ಇದುವರೆಗೆ ಕಣ್ಣಿಗೆ ಕನ್ನಡಕ ಉಪಯೋಗಿಸಿಲ್ಲ ಎನ್ನುವುದು ನಿಜ. ನನ್ನ ಸಾಕ್ಷಿಯಲ್ಲಿನ ಅಕ್ಷರಗಳನ್ನು ನಿದಾನವಾಗಿ ಓದುತ್ತೇನೆ. ನನ್ನ ಸಾಕ್ಷಿಯಲ್ಲಿರುವ ಅಂಶಗಳನ್ನು ನನಗೆ ಓದಿ ಅರ್ಥ ಮಾಡಿಕೊಳ್ಳಲು ಆಗುತ್ತದೆ. ನಿಡಿ 1 ರ ಹಿಂಬಂದಿಯಲ್ಲಿರುವಂತಹ ಷರತ್ತುಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಆಗುತ್ತದೆಯಾ ಅಂದರೆ ಸಾಕ್ಷಿ ಸಣ್ಣ ಅಕ್ಷರಗಳು ಇರುತ್ತವೆ ಎಂದು ಹೇಳುತ್ತಾರೆ. ನಿಡಿ 1 ರ ಹಿಂಬದಿಯಲ್ಲಿರುವ ಷರತ್ತುಗಳ ಅಕ್ಷರಗಳು ಹಾಗೂ ನನ್ನ ಸಾಕ್ಷಿಯಲ್ಲಿರುವಂತಹ ಅಕ್ಷರಗಳು ಒಂದೇ ಗಾತ್ರ ಇರುವುದರಿಂದ ನಿಡಿ 1 ರ ಅಕ್ಷರಗಳನ್ನು ನನಗೆ ಓದಲು ಆಗುತ್ತದೆ ಅಂದರೆ ಸಾಕ್ಷಿ ಸಣ್ಣ ಅಕ್ಷರಗಳು ಇರುತ್ತವೆ ಎಂದು ಹೇಳುತ್ತಾನೆ. ಸರ್ವೆ ನಂಃ 81 ರಲ್ಲಿ ಸರ್ಕಾರದವರು ಮಂಜೂರು ಮಾಡಿರುವಂತಹ ನಿವೇಶನಗಳ ಪಲಾನುಭವಿಗಳನ್ನು ನಾನು ನೋಡಿರುತ್ತೇನೆ. ಯಾರ್ಯಾರಿಗೆ ಮಂಜೂರು ಮಾಡಿರುತ್ತಾರೋ ಅವರು ಅಲ್ಲಿಯೇ ಮನೆ ಕಟ್ಟಿಸಿಕೊಂಡು ಇರುತ್ತಾರೆ ಎನ್ನುವುದು ನಿಜ. ಸದರಿ ಫಲಾನುಭವಿಗಳಿಗೆ ನಮ್ಮ ಊರಲ್ಲಿ ಬೇರೆ ನಿವೇಶನಗಳು ಮತ್ತು ಜಮೀನುಗಳು ಇಲ್ಲ ಎನ್ನುವುದು ನಿಜ. ಸದರಿ ಫಲಾನುಭವಿಗಳಿಗೆ ನಮ್ಮ ಊರಲ್ಲಿ ನಿವೇಶನ ಅಥವಾ ಮನೆಗಳು ಇದ್ದರೆ ಅವರಿಗೆ ಸರ್ಕಾರದ ನಿವೇಶನ ಪಡೆಯುವ ಹಕ್ಕು ಬರುವುದಿಲ್ಲ ಎನ್ನುವುದು ನಿಜ. ನಿಡಿ 1 ರ ಪ್ರಕಾರ ನಿವೇಶನವನ್ನು 1 ನೇ ಪ್ರತಿವಾದಿಗೆ ಮಂಜೂರು ಮಾಡುವ ಸಮಯದಲ್ಲಿ ಅವನು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಬೇರೆ ಇದ್ದ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ಇದ್ದಿದ್ದರೆ ನಮ್ಮ ತಂದೆಯ ಹೆಸರಿನಲ್ಲಿ ಜಮೀನುಗಳು ಮತ್ತು ಮನೆಗಳು ಇದ್ದ ಕಾರಣ ಅವನು ನಿಡಿ 1 ರಂತೆ ನಿವೇಶನವನ್ನು ಪಡೆಯಲು ಅನರ್ಹನಾಗುತ್ತಿದ್ದ ಅಂದರೆ ಸಾಕ್ಷಿ ಅವನು ಒಟ್ಟು ಕುಟುಂಬದಲ್ಲಿದ್ದ ಅವನ ಹೆಸರಿಗೆ ಪಿತ್ರಾರ್ಜಿತವಾದ ಮನೆ, ಜಮೀನು ಇಲ್ಲದ ಕಾರಣ ಅವನ ಹೆಸರಿಗೆ ನಿವೇಶನವನ್ನು ಮಾಡಿಸಿಕೊಂಡು ಬಂದಿರುತ್ತಾರೆ ಎಂದು ಹೇಳುತ್ತಾರೆ. ನಿಡಿ 1 ರಲ್ಲಿರುವ ನಿವೇಶನ 1 ನೇ ಪ್ರತಿವಾದಿಯ ಸ್ವಯಾರ್ಜಿತವಾದ ಆಸ್ತಿ ಅಗಿರುವುದರಿಂದ ಅದರಲ್ಲಿ ನನಗೆ ನಮ್ಮ ತಂದೆಗೆ ನಮ್ಮ ಅಕ್ಕತಂಗಿಯರಿಗೆ ಯಾವುದೇ ಹಕ್ಕು ಬರುವುದಿಲ್ಲ ಅಂದರೆ ಸರಿಯಲ್ಲ. ಆ ಕಾರಣಕ್ಕಾಗಿ ದಾವಾ ಸಿ ಷಡ್ಯೂಲನ 3 ಮತ್ತು 4 ನೇ ಆಸ್ತಿಗಳನ್ನು ನಮ್ಮ ತಂದೆ, ನಮ್ಮ ದೊಡ್ಡಪ್ಪ ಮತ್ತು ನಮ್ಮ ಚಿಕ್ಕಪ್ಪಂದಿರು

ಹಂಚಿಕೊಳ್ಳದೇ ಇದ್ದರೂ ಸಹ ಹಂಚಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಬಿ ಷಡ್ಯೂಲನ 1 ನೇ ಆಸ್ತಿ ಖಾತೆದಾರರು ವಿ.ಪಿ.ಮಂಜುಳಾ ಗಂಡ ಬಿ.ಎಸ್.ಚೌಡಪ್ಪ ಎಂದು ವಾದ ಪತ್ರದಲ್ಲಿ ಬರೆಸಿರುತ್ತೇನೆ ಅಂದರೆ ಸಾಕ್ಷಿ ಪಹಣಿಯಲ್ಲಿ ಬಂದಿರುವುದರಿಂದ ಆ ರೀತಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ವಿ.ಪಿ .ಮಂಜುಳಾ ಈ ಕೇಸನಲ್ಲಿ ಪಕ್ಷಗಾರಳು ಇರುವುದಿಲ್ಲ. ಸದರಿ ವಿಪಿ ಮಂಜುಳಾ ಇವಳನ್ನು ಈ ಕೇಸನಲ್ಲಿ ಪಕ್ಷಗಾರಳನ್ನಾಗಿ ಸೇರಿಸಲು ತೊಂದರೆ ಇರುವುದಿಲ್ಲ. ಅವಳನ್ನು ಪಕ್ಷಗಾರಳನ್ನಾಗಿ ಸೇರ್ಪಡೆಗೊಳಿಸದ ಕಾರಣ ದಾವೆಯನ್ನು ಕಿತ್ತು ಹಾಕಬೇಕೆಂದು ಪ್ರತಿವಾದಿಗಳು ತಕರಾರು ಸಲ್ಲಿಸಿರುತ್ತಾರೆ ಅಂದರೆ ಸಾಕ್ಷಿ ಯಾವುದೇ ಉತ್ತರವನ್ನು ಹೇಳಲಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಆಗಿರುವಂತಹ ಜಮೀನು 4 ಎಕರೆ 26 ಗುಂಟೆ ಇರುತ್ತದೆ. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಜಮೀನನ್ನು ಪಾಲಾಕ್ಷಪ್ಪ ಬಿನ್ ಮಹಾದೇವಪ್ಪ ಇವರಿಂದ ಕೊಂಡುಕೊಂಡಿರುತ್ತಾನೆ. ಎಷ್ಟು ರೂಗಳಿಗೆ ಕೊಂಡುಕೊಂಡಿರುತ್ತಾನೆ ಅಂದರೆ ಸಾಕ್ಷಿ 32,000 ರೂಗಳಿಗೆ ಎಂದು ಹೇಳುತ್ತಾರೆ. ಸದರಿ ಖರೀದಿ ಪತ್ರಕ್ಕೆನಾನು ಅಥವಾ ನನ್ನ ತಂದೆ ಸಹಿ ಮಾಡಿಲ್ಲ ಆದರೆ ವ್ಯಾಪಾರಕ್ಕೆ ಹೋಗಿದ್ದೆವು. ನಾನು ನನ್ನ ತಂದೆ ವ್ಯಾಪಾರಕ್ಕೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರಿದ ಜಮೀನನ್ನು ಖರೀದಿಸುವ ಸಮಯದಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಯಾವುದೇ ಜಮೀನು ಇಲ್ಲದ ಕಾರಣ ಅವನು ದಿಃ 25-02-1992 ರಂದು ಹರಿಹರ ತಹಶೀಲ್ದಾರರಿಂದ ಕೃಷಿ ಕಾರ್ಮಿಕರ ಸರ್ಟಿಪಿಕೆಟ್ ಪಡೆದುಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಕೃಷಿ ಕಾರ್ಮಿಕರ ಸರ್ಟಿಪಿಕೆಟನ್ನು 1 ನೇ ಪ್ರತಿವಾದಿ ಉಪ-ನೊಂದಣಾಧಿಕಾರಿಗಳ ಮುಂದೆ ಹಾಜರು ಪಡಿಸಿ ಸದರಿ ಜಮೀನನ್ನು ಕ್ರಯ ಮಾಡಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿಗಳ ಪರ ವಕೀಲರು ಕೃಷಿ ಕಾರ್ಮಿಕರ ದೃಡೀಕರಣ ಪತ್ರವನ್ನು ತೋರಿಸಲಾಗಿ ಸಾಕ್ಷಿ ಇರಬಹುದು ಆದರೆ ನಾವೆಲ್ಲಾ ದುಡಿದು ಹಿಡಿದಿರುವಂತಹ ಆಸ್ತಿ ಎಂದು ಹೇಳುತ್ತಾನೆ. ನಾವೆಲ್ಲರೂ ದುಡಿದು ಹಿಡಿದಿರುವಂತಹ ಆಸ್ತಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 25-02-1992 ರಂದು ತಹಶೀಲ್ದಾರರು ಕೊಟ್ಟಂತಹ ಕೃಷಿ ಕಾರ್ಮಿಕರ ದೃಢೀಕರಣ ಪತ್ರ ಇರುತ್ತದೆ ಅಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಃ 50

ರಲ್ಲಿರುವ ಜಮೀನು ಹರಿಹರ ಭೂ-ನ್ಯಾಯ ಮಂಡಳಿಯವರು ಕೊಟ್ಟಂತಹ ಜಮೀನು ಅಂದರೆ ಸಾಕ್ಷಿ ನಮ್ಮ ಅಜ್ಜರ ಕಾಲದ್ದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಃ 50 ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಹರಿಹರ ಭೂ-ನ್ಯಾಯ ಮಂಡಳಿಯಲ್ಲಿ ದಿಃ 09-04-1976 ರಂದು ನಮ್ಮ ಚಿಕ್ಕಪ್ಪ ಮಲ್ಲೇಶಪ್ಪನಿಗೆ ಮಂಜೂರು ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ. ಸರ್ವೆ ನಂಃ 50 ರ ಜಮೀನು ನಮ್ಮ ತಂದೆಯಾಗಲಿ ಅಥವಾ ನಮ್ಮ ಚಿಕ್ಕಪ್ಪಂದಿರಾಗಲಿ ಖರೀದಿ ಮಾಡಿದಂತಹ ಜಮೀನು ಅಲ್ಲ ಅಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಎ ಷಡ್ಯೂಲನ 1 ನೇ ಆಸ್ತಿ ಪಹಣಿಯಲ್ಲಿ ಎಷ್ಟು ಇರುತ್ತದೆಯೋ ಅಷ್ಟನ್ನು ಬರೆಸಿರುತ್ತೇನೆ ಎನ್ನುವುದು ನಿಜ. ಸದರಿ ಜಮೀನು 2 ಎಕರೆ 26 ಗುಂಟೆಯಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಒಂದು ಚಾನಲ್ ಹಾದು ಹೋಗಿರುತ್ತದೆ ಎನ್ನುವುದು ನಿಜ. ಸದರಿ ಚಾನಲ್ ದೇವರಬೆಳಕೆರೆ ಚಾನಲ್ ಎನ್ನುವುದು ನಿಜ. ಸದರಿ ಚಾನಲ್ ಹಾದು ಹೋಗಿರುವುದರಿಂದ ಸದರಿ 2 ಎಕರೆ 26 ಗುಂಟೆ ಜಮೀನು 2 ತುಂಡಾಗಿರುತ್ತದೆ ಅಂದರೆ ಸರಿಯಲ್ಲ. ಸದರಿ ಜಮೀನು 2 ಭಾಗ ಆಗಿರುತ್ತದೆ ಅಂದರೆ ಸಾಕ್ಷಿ ಸದರಿ ಜಮೀನು ಮಧ್ಯಭಾಗದಲ್ಲಿದ್ದು ಅದರ ಎರಡು ಕಡೆ ಚಾನಲ್ ಹೋಗಿರುತ್ತದೆ ಎಂದು ಹೇಳುತ್ತಾರೆ. ಸದರಿ ದೇವರಬೆಳಕೆರೆ ಚಾನಲ್ ಪೂರ್ವದಿಂದ ಪಶ್ಚಿಮಕ್ಕೆ ಬಂದು ಮುಂದೆ ಬೇರೆಯವರ ಜಮೀನಿನಲ್ಲಿ ತಿರುಗಿ ಪಶ್ಚಿಮದಿಂದ ಪೂರ್ವಕ್ಕೆ ಹೋಗಿರುತ್ತದೆ. ದೇವರಬೆಳಕೆರೆ ಚಾನಲ್ ನಮ್ಮ ಜಮೀನು ಕೆಳಗೆ ಮತ್ತು ಮೇಲೆ ಎರಡು ಕಡೆ ಹಾದು ಹೋಗಿರುತ್ತದೆ. ಪಹಣಿಯಲ್ಲಿರುವ ವಿಸ್ತೀರ್ಣ ಚಾನಲಗೆ ಹೋಗಿರುವ ಜಮೀನು ಸೇರಿ ಇದೆ ಅಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ.

<u>ಮುಂದುವರೆದ ಪಾಟೀ ಸವಾಲುಃ 1 ರಿಂದ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>

**(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).**

**ಓ ಹೇ ಕೆ ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹರಿಹರ.**